# ಸಂಪತ್ ಅಭಿನಯ ಸಖತ್ತು ಪ್ರತಿಭೆಯೇ ತಾಕತ್ತು

ಕಣ್ಣಲ್ಲೇ ಕಿಡಿಹೊಮ್ಮಿಸಬಲ್ಲ ಪ್ರತಿಭಾವಂತ ನಟ ಸಂಪತ್‌ಕುಮಾರ್. ಇತ್ತೀಚೆಗೆ ತೆರೆಕಂಡ 'ಕವಲುದಾರಿ' ಸಿನಿಮಾದ ಪಾತ್ರ ಅವರಿಗೆ ಅವಕಾಶಗಳ ನಕ್ಷತ್ರಲೋಕವನ್ನು ತೆರೆದುಕೊಟ್ಟಿದೆ. ಇಂದಿಗೂ ರಂಗಭೂಮಿಯ ಗಾಢ ನಂಟನ್ನು ಉಳಿಸಿಕೊಂಡಿರುವ ಸಂಪತ್‌ಗೆ ಕಲಾವಿದನಿಗೆ ಇರಬೇಕಾದ ನೈತಿಕ ಹೊಣೆಗಾರಿಕೆಯ ಕುರಿತೂ ಅರಿವಿದೆ.

■ ಪದ್ಮನಾಭ ಭಟ್



◆ **ನಿಮ್ಮ ಬಾಲ್ಯದ ಜೀವನ ಹೇಗಿತ್ತು?**

ನಾನು ರಾಮನಗರ ಜಿಲ್ಲೆಯ ನಾರಾಯಣಪುರ ಎಂಬ ಚಿಕ್ಕ ಹಳ್ಳಿಯಲ್ಲಿ ಹುಟ್ಟಿ ಬೆಳೆದವನು. ರೈತಾಪಿ ಕುಟುಂಬ ನಮ್ಮದು. ಎಸ್‌ಎಸ್‌ಎಲ್‌ಸಿವರೆಗೂ ಹಳ್ಳಿಯಲ್ಲಿಯೇ ಓದಿದ್ದು. ನನ್ನ ತಂದೆಗೆ ನನ್ನನ್ನು ಓದಿಸುವ ಆಸಕ್ತಿ ಇರಲಿಲ್ಲ. ಆದರೆ ನನಗೆ ಓದುವ ಆಸಕ್ತಿ ಇತ್ತು. ನನ್ನ ಓದಿನ ಆಸಕ್ತಿ ಗಮನಿಸಿ ಬೆಂಗಳೂರಿನಲ್ಲಿದ್ದ ದೊಡ್ಡಪ್ಪ ತಮ್ಮ ಮನೆಗೆ ಕರೆದುಕೊಂಡು ಬಂದರು. ಬೆಳಗಿನಿಂದ ಸಂಜೆಯವರೆಗೂ ಡ್ರೈವರ್ ಆಗಿ, ಸೇಲ್ಸ್ ರೆಪ್ರೆಸೆಂಟೇಟಿವ್ ಆಗಿ ಕೆಲಸ ಮಾಡಿ, ಸಾಯಂಕಾಲ ಎಪಿಎಸ್ ಕಾಲೇಜಿಗೆ ಹೋಗುತ್ತಿದ್ದೆ.

ಸಿನಿಮಾ ನೋಡುವ ಆಸಕ್ತಿ ಬಹಳ ಇತ್ತು. ಹಳ್ಳಿಗಳಲ್ಲಿ ನಡೆಯುತ್ತಿದ್ದ ನಾಟಕಗಳಿಗೂ ಹೋಗುತ್ತಿದ್ದೆ. ಚಿಕ್ಕವನಾಗಿದ್ದಾಗ ಹೊಲಕ್ಕೆ ಹೋದರೆ ಅಲ್ಲಿಗೆ ಕಳೆ ಕೀಳಲು ಕೆಲಸಕ್ಕೆ ಬರುವ ಹೆಂಗಸರು ಹಾಡುಗಳನ್ನು, ಜಾನಪದ ಕಥೆಗಳನ್ನು ಹೇಳುತ್ತಿದ್ದರು. ನಮ್ಮ ಮನೆಯಲ್ಲಿ ಪ್ರತಿದಿನ ಸಾಯಂಕಾಲ ಭಜನೆ ಮಾಡುತ್ತಿದ್ದರು. ನನಗೆ ಅವು ಅರ್ಥ ಆಗ್ತಿರ್ಲಿಲ್ಲ. ಆದ್ರೆ ಊರವರೆಲ್ಲ ಬಂದು ಸೇರುತ್ತಿದ್ದರು. ಅಜ್ಜಿ–ತಾತ ತಂಬೂರಿ ಹಿಡಿದು ಭಜನೆ ಹಾಡುತ್ತಿದ್ದರು. ಇವೆಲ್ಲವೂ ನನ್ನೊಳಗೆ ಗೊತ್ತಿಲ್ಲದೆಯೇ ಯಾವುದೋ ಸಂವೇದನೆ ಬೆಳೆಸುತ್ತಿದ್ದವು.

◆ **ರಂಗಭೂಮಿ ನಂಟು ಬೆಳೆದಿದ್ದು ಯಾವಾಗ?**

ಹಂಗೋ ಹಿಂಗೋ ಡಿಗ್ರಿ ಮುಗಿಸಿದೆ. ಅಲ್ಲಿ ಸುದರ್ಶನ್ ಅಂತ ಇಂಗ್ಲಿಷ್ ಉಪನ್ಯಾಸಕರಿದ್ದರು. ಅವರು 'ರಂಗಭೂಮಿ' ಹಿನ್ನೆಲೆಯಿದ್ದವರು. ಅವರನ್ನೊಮ್ಮೆ 'ಸರ್, ಡಿಗ್ರಿ ಮುಗೀತು. ಮುಂದೆ ಏನು ಮಾಡಬೇಕು ಗೊತ್ತಾಗ್ತಿಲ್ಲ' ಎಂದು ಕೇಳಿದೆ. ಅವರು ನನ್ನನ್ನು 'ಅಭಿನಯ ತರಂಗ'ಕ್ಕೆ ಸೇರಿಸಿದರು. ಅಲ್ಲಿ ಒಂದು ವರ್ಷದ ಡಿಪ್ಲೊಮಾಗೆ ಸೇರಿಕೊಂಡೆ. ಅಲ್ಲಿ ರಂಗಭೂಮಿ ತುಂಬಾ ಕ್ರಿಯೇಟಿವ್ ಅನಿಸಕ್ಕೆ ಶುರುವಾಯ್ತು. ಡ್ರೈವರ್ ಕೆಲಸ ಬಿಟ್ಟು ಸಂಪೂರ್ಣವಾಗಿ ರಂಗಭೂಮಿಯಲ್ಲಿ ತೊಡಗಿಕೊಂಡೆ. ಬಸವಲಿಂಗಯ್ಯ ಅವರು ಸಿಕ್ಕರು. ಅವರ ಜತೆ ಎಂಟುವರ್ಷ ಕೆಲಸ ಮಾಡಿದೆ. ಬೀದಿನಾಟಕಗಳನ್ನು ಮಾಡಿದೆವು. ನಾವೇ ತಂಡಗಳನ್ನು ಕಟ್ಟಿಕೊಂಡು ನಾಟಕ ಮಾಡಿದೆವು.

◆ **ಸಿನಿಮಾರಂಗಕ್ಕೆ ಪ್ರವೇಶ ಪಡೆದಿದ್ದು ಹೇಗೆ?**

ನಾನು ಮೊದಲು ಕ್ಯಾಮೆರಾ ಎದುರಿಸಿದ್ದು ಕಿರುತೆರೆಯಲ್ಲಿ. ಆಗ ನಾಗತಿಹಳ್ಳಿ ಚಂದ್ರಶೇಖರ ಅವರ 'ಬೆಳ್ಳಿಚುಕ್ಕಿ' ಸೀರಿಯಲ್ ಬರ್ತಾ ಇತ್ತು. ಅದರಲ್ಲಿ ನಟಿಸಿದೆ. ನಂತರ ನಾಗಾಭರಣ ಅವರ 'ಅಪ್ಪ', ಕೆ.ಎಂ. ಚೈತನ್ಯ ಅವರ 'ಮುಗಿಲು', ಗೋವಿಂದಯ್ಯ ಅವರ 'ಸಂಬಂಧಗಳು' ಹೀಗೆ ಧಾರಾವಾಹಿಗಳಲ್ಲಿ ನಟಿಸಲು ತೊಡಗಿದೆ. ಆಗಲೂ ನನ್ನ ಪ್ರಧಾನ ಆಸಕ್ತಿ ಇದ್ದಿದ್ದು ನಾಟಕದಲ್ಲಿಯೇ. ಸ್ನೇಹಿತರೆಲ್ಲ 'ಬರೀ ರಂಗಭೂಮಿಗೆ ಸೀಮಿತಗೊಳ್ಳಬೇಡ. ಸಿನಿಮಾದಲ್ಲಿಯೂ ಪ್ರಯತ್ನಿಸು'